

ಪತ್ನಿ ಲಕ್ಷ್ಮಿ ಅವರೊಂದಿಗೆ ಜಿ. ವೆಂಕಟಸುಬ್ಬಯ್ಯ

ಮಾಡಿದರು. 'ಎಷ್ಟೇ ಕಷ್ಟವಿದ್ದರೂ ಮಕ್ಕಳಿಗೆ ಅವರು ಊಟಕ್ಕೆ ತುಪ್ಪ ತಪ್ಪಿಸಿದವರಲ್ಲ' ಎಂದು ನೆನಪಿಸಿಕೊಂಡಾಗ ಜಿ.ವಿಯವರ ಕಣ್ಣುಗಳು ಮಿನುಗುತ್ತಿದ್ದವು.

ತಾಯಿ ಸುಬ್ಬಮ್ಮನವರ ಪ್ರಭಾವ ಕೂಡ ವೆಂಕಟಸುಬ್ಬಯ್ಯನವರ ಮೇಲೆ ಸಾಕಷ್ಟು ಆಗಿದೆ. ಓದದೆಯೇ ಕುಮಾರವ್ಯಾಸ ಭಾರತದ ಹಲವು ಪದ್ಯಗಳನ್ನು ಅವರ ತಾಯಿ ಸುಶ್ರಾವ್ಯವಾಗಿ ಹಾಡ ಬಲ್ಲವರಾಗಿದ್ದರು. ಸಂಪ್ರದಾಯದ ಅನೇಕ ಹಾಡುಗಳನ್ನು ಸೊಗಸಾಗಿ ಹಾಡುತ್ತಿದ್ದರು. 'ಓದಿದ್ದರೆ ಅವರು ನಮ್ಮೆಲ್ಲರನ್ನೂ ಮೀರಿಸುತ್ತಿದ್ದರು' ಎಂದು ಜಿ.ವಿ ಬಲು ಹೆಮ್ಮೆಯಿಂದ ಹೇಳುತ್ತಿದ್ದರು. ಅಡುಗೆಯ ವಿಷಯದಲ್ಲಿ ಅವರ ತಾಯಿ ಸಿದ್ಧಹಸ್ತರು. ಅವರು ಮಾಡುತ್ತಿದ್ದ ತಿಳಿಸಾರಂತೂ ಅಮೃತ ಸಮಾನವಂತೆ. 'ಸುಬ್ಬಮ್ಮನವರ ಸಾರು' ಎಂದೇ ಅದು ಬಂಧು ಬಾಂಧವರಲ್ಲಿ ಹೆಸರನ್ನು ಪಡೆದಿತ್ತು. ಅತಿಥಿ ಸತ್ಕಾರದಲ್ಲಿ ಕೂಡ ಅವರು ಪ್ರಸಿದ್ಧಿಯನ್ನು ಪಡೆದವರು. 'ನೂರು ವರ್ಷ ಸಾರ್ಥಕವಾಗಿ ಬಾಳು' ಎಂಬ ಉಪನಿಷತ್ ವಾಕ್ಯದ ಸಾರ್ಥಕ ರೂಪಕ ಅವರು ಎಂದು ಬಹು ಹೆಮ್ಮೆಯಿಂದ ಹೇಳುತ್ತಿದ್ದರು. (ಸ್ವತಃ ಜಿ.ವಿಯವರೂ ಅದಕ್ಕೆ ನಿದರ್ಶನವಾಗಿದ್ದರು). ಈ ತಾಯಿ ತನ್ನ 100ನೇ ವರ್ಷದಂದು ಮಕ್ಕಳೆಲ್ಲರನ್ನೂ ಕೂಡಿಸಿ ತಾನೇ ಸೌಟು ಹಿಡಿದು ಬಡಿಸಿದ ಭಾಗ್ಯವಂತೆ. ದೀರ್ಘಾಯುಷ್ಯ ವೆಂಕಟಸುಬ್ಬಯ್ಯನವರಿಗೆ ವಂಶಪಾರಂಪರ್ಯವಾಗಿ ಬಂದ ಬಳುವಳಿ. ತಂದೆ ತಿಮ್ಮಣ್ಣಯ್ಯ 90 ವಸಂತಗಳನ್ನು ಕಂಡರೆ, ತಾಯಿ 107 ವರ್ಷಗಳ ತುಂಬು ಬಾಳ್ವೆ ನಡೆಸಿದವರು. ಅವರ ತಮ್ಮ ಎಂದರೆ ಜಿ.ವಿಯವರ ಸೋದರ ಮಾವ 102 ವರ್ಷಗಳ ಜೀವನ ನಡೆಸಿದವರು.